Smt. GRACE TUCKER.—Sir, I would like to clarify one point raised by Sri Lakkappa in a previous question, about M.As. and M.Scs. handling 11th class at the moment and who have passed privately. It is only those who are handling standrad XI who will be considered for two advance increments.

Mr. SPEAKER.—Please do not forget to get that information from the officer and give it to the Members because it has come more than once.

ಶ್ರೀ ಜೆ. ದೇವಯ್ಯ.—ಇತರ ವಿಶ್ವವಿದ್ಯಾನಿಲಯದ ಲೆಕ್ಚರರುಗಳಿಗೆ ಖಾಯಂ ಮಾಡಿದ ಹಾಗೆ ಈ ವಿಶ್ವವಿದ್ಯಾನಿಲಯದಲ್ಲಿರತಕ್ಕ ಲೆಕ್ಚರರುಗಳನ್ನು ಏತಕ್ಕೆ ಖಾಯಂ ಮಾಡಲಿಲ್ಲ ?

Smt. GRACE TUCKER.—I want notice, Sir.

Mr. SPEAKER.—Question Hour is over.

Member's Representation.

ಶ್ರೀ ಬಿ. ಭಾಸ್ಕರಶೆಟ್ಟಿ (ಕೌಪ್).—ಈ ಮಾನ್ಯ ಸಭೆಯ ಒಬ್ಬ ಸದಸ್ಯರನ್ನು 3ನೇ ತಾರೀಖಿನ ದಿನ ಬಂಧನಮಾಡಿ ಆಮೇಲೆ ಬಿಡುಗಡೆ ಮಾಡಿದೆ ಎಂಬುದಾಗಿ ಈ ಬೆಳಿಗ್ಗೆ ವೃತ್ತಪತ್ರಿಕೆಯಲ್ಲಿ ಬಂದಿದೆ. ಈ ವಿಷಯ ಮೊದಲು ತಮ್ಮ ಅವಗಾಹನೆಗೆ ಬಂದು ತಾವು ಅದನ್ನು ಈ ಮಾನ್ಯ ಸಭೆಯ ಗಮನಕ್ಕೆ ತರುವಂಥಾದ್ದು ಸಂಪ್ರದಾಯ. ಆ ವಿಷಯವೇನಾದರೂ ಇದುವರೆಗೆ ತಮ್ಮ ಗಮನಕ್ಕೆ ಬಂದಿದೆಯೇ ಅಥವಾ ಅದಿನ್ನೂ ಬಾರದೇ ಇದ್ದರೆ ಅದರ ಬಗ್ಗೆ ತಕ್ಕ ಕ್ರಮವನ್ನು ಕೂಡಲೇ ತಾವು ತೆಗೆದುಕೊಳ್ಳಬೇಕು.

Mr. SPEAKER.—The matter having been raised, I will call for a report from the Police and the Home Ministry as to whether such a thing has happened or not.

Sri V. M. DEO (Gubbi).—The Hon'ble Member is in the House.

Mr. SPEAKER.—It is for him to say it.

ಶ್ರೀ ಜಿ. ಟಿ. ರಂಗಪ್ಪ (ಹೊಸದುರ್ಗ).—ಸ್ವಾಮಿ, ಈ ದಿನ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳನ್ನು ನೋಡಿದ ಮೇಲೆ ನನಗೇ ಆಶ್ಚರ್ಯವಾಯಿತು. ನನ್ನ ಸ್ನೇಹಿತರೂ ಕೂಡ ಆಶ್ಚರ್ಯಪಟ್ಟಿದ್ದಾರೆ. ನನ್ನನ್ನು ಹಿರಿಯೂರು ಪೋಲೀಸ್ ಇನ್‌ಸ್ಪೆಕ್ಟರ್ ಯಾರೂ ದನ್ತಗಿರಿ ಮಾಡಲಿಲ್ಲ. ನಾನು ಕೋರ್ಟಿಗೆ ಹೋಗಿ ಹಾಜರಾಗಿ ಬಂದಿಲ್ಲ. 3ನೇ ತಾರೀಖು ನಾನು ಯಾವ ಕೋರ್ಟಿಗೂ ಹೋಗಿಲ್ಲ.

ಅಧ್ಯಕ್ಷರು.—ನಿಮ್ಮನ್ನು ಜಾಮೀನು ಮೇಲೆ ಬಿಡಿಸಿದ್ದಾರೆಂದು ಪತ್ರಿಕೆಯಲ್ಲಿ ಬಂದಿದೆ. ನಿಮ್ಮ ಹೆಸರೂ ಕೂಡ ಬಂದಿದೆ.

ಶ್ರೀ ಜಿ. ಟಿ. ರಂಗಪ್ಪ.—ಅದು ಸುಳ್ಳು. ಇದು ಸತ್ಯಕ್ಕೆ ದೂರವಾದಂಥ ವಿಷಯ. ಏಕೆ ಆ ರೀತಿ ಸುಳ್ಳು ಹೇಳಿಕೆಯನ್ನು ಪ್ರಕಟಿಸಿದ್ದಾರೋ ಗೊತ್ತಿಲ್ಲ. ಆದ್ದರಿಂದ ಕಾನೂನು ರೀತ್ಯ ಡೆಫಮೇಷ್ಟ್ ಹೋಗುವ ಬಗ್ಗೆ ಲಾಯರ್ ನೋಟೀಸ್ ಕೊಟ್ಟು ತಕ್ಕ ಕ್ರಮವನ್ನು ನಾನು ತೆಗೆದುಕೊಳ್ಳುತ್ತೇನೆ. ಈ ರೀತಿ ತಪ್ಪಾಗಿ ಪ್ರಕಟಿಸುವುದರಿಂದ ಈ ಮನೆಗೂ ಕೂಡ ಅಪಚಾರ ಮಾಡಿದಂತಾಗುತ್ತದೆ. ಅದಕ್ಕಾಗಿ ಈ ಬಗ್ಗೆ ಅಧ್ಯಕ್ಷರು ಕಾನೂನು ರೀತ್ಯಾ ತಕ್ಕ ಕ್ರಮವನ್ನು ತೆಗೆದುಕೊಳ್ಳಬೇಕೆಂದು ಅರಿಕೆಮಾಡಿಕೊಳ್ಳುತ್ತೇನೆ.

Sri B. L. GOWDA (Challakere).—If the Member is arrested and the Hon'ble Speaker is not informed, it is breach of privilege. I request the Speaker to take suitable action in the matter.

Mr. SPEAKER.—I said at the very beginning that I will call for a report from the authorities. There is nothing new that is being added. So far as giving protection is concerned, I can only say that the rules are observed. If any wrong, incorrect information is published in the papers, it is a matter for the paper to see what it should do and it is for the Member to see that steps should be taken. I cannot control news papers. The Hon'ble Member is committing the same offence which, I said, should not be committed. I want to know whether it has been brought to my notice. I have already said that as a young man, he must have control over his mind. Simply because something rushes to his mind, he should not get up and say something. I have already called for information. I would say that I would do all that is possible for me to protect the Members. If papers choose to publish wrong information, it is a reflection upon them and not an infringement of the rules. If it is anything which has happened within the precincts of the House, I can go into it and take action against the representative of that paper who is in the Press Gallery. But if it is anything which has happened outside the House, I have no control; it is left to the discretion and propriety of the paper concerned.

Thirty-Second Report of the Business Advisory Committee.

Sri A. R. PANCHAGAVI.—Sir, I beg to present the Thirty-Second Report of the Business Advisory Committee.

Mr. SPEAKER.—I trust the House agrees to it.

Sri C. J. MUCKANNAPPA (Sira).—Sir, day before yesterday, there was so much commotion about it. On that day, there were heated exchanges between the Speaker and one of the Members.

Mr. SPEAKER.—Is the Member belonging to any party or group; if so, his representation has been there. After all, we must built up certain conventions.

Sri C. J. MUCKANNAPPA.—Is it the privilege of a member who belongs to a group or party alone to have representation and not others ?

Mr. SPEAKER.—Representation is different from trying to dissent from an agreement arrived at.

Sri C. J. MUCKANNAPPA.—I am not questioning the Business Advisory Committee's Report.

Mr. SPEAKER.—The Hon'ble Member is putting forth profuse words which I cannot understand.

†ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ಈಗ ತಾನೆ ಈ ಸಭೆಯು ಮುಂದೆ ಮಂಡಿಸಿರುವ ಕಾರ್ಯಕಲಾಪಗಳ ಸಲಹಾಸಮಿತಿಯ 32ನೇ ವರದಿಯನ್ನು ನೋಡಿ ನನಗೆ ಬಹಳ ಆಶ್ಚರ್ಯವಾಯಿತು. ಏಪ್ರಿಲ್ ತಿಂಗಳು 3ನೇ ತಾರೀಖಿಗೆ ಈ ಸಭೆಯ ಅಧಿವೇಶನ ಮುಗಿಯು